ಸಾಕ್ಷಿ ಯನ್ನು ದಿಃ20.09.2024 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿದ್ದು, ಅವುಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿ, ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

1. ದಿ.08.11.2010 ರಂದು ಎಸ್.ಕೆ.ಹರೀಶಪ್ಪ ಬಿನ್ ಕುಮಾರಸ್ವಾಮಿ ಮತ್ತು ಕೆ.ಪಿ. ಮಹಾಲಿಂಗಪ್ಪ ಬಿನ್ ಲೇಟ್ ಪುಟ್ಟಪ್ಪಶೆಟ್ಟಿ ರವರ ನಡುವೆ ಆದ ಸ್ವಾಧೀನ ರಹಿತ ಕ್ರಯದ ಒಪ್ಪಂದ ಪತ್ರವನ್ನು ನಿ.ಪಿ. 1 ಎಂದು ಗುರುತಿಸಲಾಯಿತು.
2. ಸಾಕ್ಷಿಯು ನಿಪಿ - 1 ರಲ್ಲಿರುವ ತಮ್ಮ ಪತಿ ಎಸ್.ಕೆ.ಹರೀಶಪ್ಪ ರವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ - 1(ಎ) ಎಂದು ಗುರುತಿಸಲಾಯಿತು.
3. ದಿ.04.03.2020 ರಂದು ಪ್ರತಿವಾದಿಗೆ ಕಳುಹಿಸಿದ ತಿಳುವಳಿಕೆ ಪತ್ರವನ್ನು ನಿ.ಪಿ.2 ಎಂದು,
4. ಒಂದು ಅಂಚೆ ರಸೀದಿಯನ್ನು ನಿ.ಪಿ. 3 ಎಂದು,
5. 'Left' ಎಂಬ ಷರಾದೊಂದಿಗೆ ವಾಪಸಾದ ಅಂಚೆ ಲಕೋಟೆಯನ್ನು ನಿಪಿ - 4 ಎಂದು,
6. ಹರೀಶಪ್ಪ ಎಸ್.ಕೆ. ರವರ ಮರಣ ಪ್ರಮಾಣಪತ್ರವನ್ನು ನಿ.ಪಿ.5 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು|**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ